**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್ ರವರು ನಿಯಮ-330 ರಡಿಯಲ್ಲಿ ಮಂಡಿಸಿರುವ ಸೂಚನಾ ಪತ್ರಕ್ಕೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.**

**ಪ್ರಶ್ನೆ:**

ದಿನಾಂಕ:16.09.2021ರಂದು ವಿಧಾನ ಪರಿಷತ್ತಿನಲ್ಲಿ ವಿಸ್ತೃತವಾಗಿ ಚರ್ಚಿಸಿದಂತೆ ಹಾಗೂ ವಿರೋಧ ಪಕ್ಷದ ನಾಯಕರೂ ಸೇರಿದಂತೆ ಎಲ್ಲಾ ಪಕ್ಷಗಳ ಸರ್ವ ಸದಸ್ಯರು ಒತ್ತಾಯಿಸಿದ ಮೇರೆಗೆ ಪೊಲೀಸ್ ಇಲಾಖೆಯ ಅಧಿಸೂಚನೆ ಸಂಖ್ಯೆ:10/ನೇಮಕಾತಿ-4/ಡಿಐಜಿಪಿ/2011-12 ದಿನಾಂಕ:09.01.2012ದಲ್ಲಿ 750 ಹುದ್ದೆಗಳಿಗೆ ಸಂಬಂಧಿಸಿದಂತೆ ಎ.ಡಿ.ಜಿ.ಪಿ, ಕೆಎಸ್‌ಆರ್‌ಪಿ, ಎಡಿಜಿಪಿ ನೇಮಕಾತಿ, ಮತ್ತು ಎಡಿಜಿಪಿ ಆಡಳಿತ ಹಾಗೂ ಎಸಿಎಸ್ ಗೃಹ ಇಲಾಖೆಯವರನ್ನೊಳಗೊಂಡಂತೆ ಮಾನ್ಯ ಗೃಹ ಸಚಿವರ ನೇತೃತ್ವದಲ್ಲಿ ದಿನಾಂಕ:22.03.2022 ರಂದು ನಡೆದ ಸಭಾ ನಡವಳಿ ಸಂಖ್ಯೆ:ಒಇ 42 ಪಿಪಿಎಸ್ 2019 ದಿನಾಂಕ:31.05.2022ರಲ್ಲಿ ಸ್ಪಷ್ಟವಾಗಿ ಕರೆ ಪತ್ರ ಕಳುಹಿಸಲಾದ 488 ಅಭ್ಯರ್ಥಿಗಳಲ್ಲಿ 111 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಿದ್ದ ಉಳಿದ ಅಭ್ಯರ್ಥಿಗಳಿಗೆ ನೀಡದಿರುವುದನ್ನು ಪರಿಗಣಿಸಿ 488 ಅಭ್ಯರ್ಥಿಗಳಲ್ಲಿ 111 ಅಭ್ಯರ್ಥಿಗಳನ್ನು ನೇಮಕಾತಿಗೊಳಿಸಿದಂತೆ, ಅದೇ ಪ್ರಕ್ರಿಯೆಯನ್ನು ಮುಂದುಮರೆಸಿ ಒಂದು ಬಾರಿಯ ಕ್ರಮವಾಗಿ ಮಾನವೀಯ ನೆಲೆಯಲ್ಲಿ ಬಾಕಿ ಉಳಿದಿರುವ ಅಭ್ಯರ್ಥಿಗಳಿಗೆ ಅಂತಿಮ ಅವಕಾಶವನ್ನು ನೀಡುವ ಮೂಲಕ ನೇಮಕಾತಿ ಆದೇಶ ಹೊರಡಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಈ ಕುರಿತು ದಿನಾಂಕ 22.09.2022ರಂದು ಸದನದಲ್ಲಿ ಕೇಳಿದ ಪ್ರಶ್ನೆ ಸಂಖ್ಯೆ-1015ಕ್ಕೆ ಉತ್ತರವಾಗಿ ಈ ಕುರಿತು ದಾಖಲೆಗಳನ್ನು ಸಂಗ್ರಹಿಸುತ್ತಿರುವುದಾಗಿ ಸದನಕ್ಕೆ ಉತ್ತರಿಸಲಾಗಿತ್ತು, ಸರಕಾರದಿಂದ ದಿನಾಂಕ:28.10.2022ರಂದು ಈ ಐಆರ್‌ಬಿ ನೇಮಕಾತಿ ಪ್ರಕ್ರಿಯೆಯನ್ನು ಶೀಘ್ರವಾಗಿ ಕಾಲ ಮಿತಿಯಲ್ಲಿ ಪೂರ್ಣಗೊಳಿಸುವಂತೆ ಸೂಚಿಸಲಾಗಿತ್ತು. ಈ ಎಲ್ಲಾ ವಿಷಯಗಳನ್ನು ಪರಿಗಣಿಸಿ ಸಭೆಯಲ್ಲಿನ ನಿರ್ಣಯಗಳನ್ನು ಯಥಾವತ್ತಾಗಿ ಅನುಷ್ಠಾನಗೊಳಿಸುವ ಮೂಲಕ ಬಳಲಿದ ನೊಂದ, ಬಸವಳಿದ, ಬಡ, ರೈತ, ಕೂಲಿ ಕಾರ್ಮಿಕ, ಹಿಂದುಳಿದ ಪರಿಶಿಷ್ಟ ಜಾತಿ(ಎಸ್‌ಸಿ) ಹಾಗೂ ಪರಿಶಿಷ್ಟ ಪಂಗಡದ (ಎಸ್‌ಟಿ) ಅಭ್ಯರ್ಥಿಗಳಿಗೆ ನೌಕರಿ ನೀಡುವ ಮೂಲಕ ಜೀವಿಸಲು ಅವಕಾಶ ಕಲ್ಪಿಸುವ ಕುರಿತು.

**ಉತ್ತರ:**

2012ನೇ ಸಾಲಿನಲ್ಲಿ ಕೆ.ಎಸ್.ಆರ್.ಪಿ., ಐ.ಆರ್.ಬಿ. ಹಾಗೂ ಕೆ.ಎಸ್.ಐ.ಎಸ್.ಎಫ್. ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳಿಗೆ ನೇಮಕಾತಿಯ ಅಧಿಸೂಚನೆಯನ್ನು ನೇಮಕಾತಿ ಕಛೇರಿಯಿಂದ ಏಕಕಾಲದಲ್ಲಿ ಹೊರಡಿಸಲಾಗಿರುತ್ತದೆ. ಈ 3 ಘಟಕಗಳ ತಾತ್ಕಾಲಿಕ ಆಯ್ಕೆ ಪಟ್ಟಿಗಳನ್ನೂ ಸಹ ಏಕಕಾಲದಲ್ಲಿ ಪ್ರಕಟಣೆಗೊಳಿಸಲಾಗಿರುತ್ತದೆ. ಸದರಿ 3 ಘಟಕಗಳ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದ ಅಭ್ಯರ್ಥಿಗಳಿಗೆ ದಾಖಲಾತಿ ಪರಿಶೀಲನೆ ಹಾಗೂ ವೈದ್ಯಕೀಯ ಪರೀಕ್ಷೆಗೆ ಕರೆಯಲಾದ ಸಂದರ್ಭದಲ್ಲಿ, ಡಿಐಜಿಪಿ, ನೇಮಕಾತಿ, ಬೆಂಗಳೂರು ರವರು ದಾಖಲಾತಿ ಪರಿಶೀಲನೆ ಹಾಗೂ ವೈದ್ಯಕೀಯ ಪರೀಕ್ಷೆ ನಡೆಸಲು ರಚಿಸಲಾದ ಸಮಿತಿ ಸದಸ್ಯರುಗಳ ಸಭೆಯನ್ನು ಕರೆದು, ಸದರಿ ಸಭೆಯಲ್ಲಿ ದಾಖಲಾತಿ ಪರಿಶೀಲನೆ ಸಮಯದಲ್ಲಿ ಹಾಜರಾಗುವ ಅಭ್ಯರ್ಥಿಗಳಿಂದ ರೂ.20-00 ಗಳ ಛಾಪಾ ಕಾಗದದ ಮೇಲೆ ಲಿಖಿತ ರೂಪದಲ್ಲಿ ತಾವು ಕೆ.ಎಸ್.ಆರ್.ಪಿ., ಐ.ಆರ್.ಬಿ. ಅಥವಾ ಕೆ.ಎಸ್.ಐ.ಎಸ್.ಎಫ್. ಆರ್.ಪಿ.ಸಿ. ಹುದ್ದೆಗೆ ಆಯ್ಕೆಯಾಗಿದ್ದಲ್ಲಿ, ಯಾವುದಾದರೂ ಒಂದು ಘಟಕದ ಆರ್.ಪಿ.ಸಿ. ಹುದ್ದೆಗೆ ಆಯ್ಕೆ ಮಾಡಿಕೊಳ್ಳುವುದಾಗಿ ಸಹಮತ ನೀಡಿ, ಉಳಿದ ಎರಡು ಘಟಕಗಳ ಅಭ್ಯರ್ಥಿತನವನ್ನು ರದ್ದುಪಡಿಸುವಂತಹ ಮುಚ್ಚಳಿಕೆ ಪ್ರಮಾಣ ಪತ್ರವನ್ನು ಪಡೆಯುವಂತೆ ಮೌಖಿಕವಾಗಿ ಸೂಚಿಸಿರುತ್ತಾರೆ.

ಅದರನ್ವಯ, ದಾಖಲಾತಿ ಪರಿಶೀಲನೆ ಹಾಗೂ ವೈದ್ಯಕೀಯ ಪರೀಕ್ಷೆ ಸಂದರ್ಭದಲ್ಲಿ ಏಕಕಾಲದಲ್ಲಿ ಮೂರು ಘಟಕಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಂದ ಡಿಐಜಿಪಿ, ನೇಮಕಾತಿ, ಬೆಂಗಳೂರು ರವರ ಮೌಖಿಕ ಸೂಚನೆಯಂತೆ, ಮುಚ್ಚಳಿಕೆ ಪ್ರಮಾಣ ಪತ್ರ ಪಡೆಯಲಾಗಿರುತ್ತದೆ. ಮುಂದುವರೆದಂತೆ, ಮುಚ್ಚಳಿಕೆ ಪ್ರಮಾಣ ಪತ್ರ ಪಡೆಯಲಾದ ಅಭ್ಯರ್ಥಿಗಳನ್ನು ಆಯ್ಕೆ ಪಟ್ಟಿಯಿಂದ ಕೈ ಬಿಟ್ಟು ಅರ್ಹತಾ ಪಟ್ಟಿಯನುಸಾರ ಹೆಚ್ಚುವರಿ ಅಭ್ಯರ್ಥಿಗಳಿಗೆ ದಾಖಲಾತಿ ಪರಿಶೀಲನೆ ಹಾಗೂ ವೈದ್ಯಕೀಯ ಪರೀಕ್ಷೆಗೆ ಕರಪತ್ರಗಳನ್ನು ಕಳುಹಿಸಲಾಗಿದ್ದು, ಇದರನ್ವಯ ದಾಖಲಾತಿ ಪರಿಶೀಲನೆ ಹಾಗೂ ವೈದ್ಯಕೀಯ ಪರೀಕ್ಷೆಯ ಪ್ರಕ್ರಿಯೆಯನ್ನು 03 ಹಂತದಲ್ಲಿ ಕೈಗೊಳ್ಳಲಾಗಿರುತ್ತದೆ. ಸದರಿ ಪ್ರಕ್ರಿಯೆಯು ಚಾಲ್ತಿಯಲ್ಲಿರುವ ಸಂದರ್ಭದಲ್ಲಿ ಅಧ್ಯಕ್ಷರು, ಡಿಐಜಿಪಿ, ಕೆ.ಎಸ್.ಆರ್.ಪಿ., ಬೆಂಗಳೂರು ರವರು ಸದರಿ ಪ್ರಕ್ರಿಯೆಗೆ ಆಕ್ಷೇಪಣೆ ವ್ಯಕ್ತಪಡಿಸಿದ್ದು, ಈ ರೀತಿ ಹೆಚ್ಚುವರಿ ಅಭ್ಯರ್ಥಿಗಳನ್ನು ದಾಖಲಾತಿ ಪರಿಶೀಲನೆ ಹಾಗೂ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲು ಕೆ.ಎಸ್.ಆರ್.ಪಿ. (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು–2009 ರನ್ವಯ ನಿಯಮಗಳಲ್ಲಿ ಅವಕಾಶವಿಲ್ಲವಾದ ಕಾರಣ, ಹೆಚ್ಚುವರಿಯಾಗಿ ದಾಖಲಾತಿ ಪರಿಶೀಲನೆ ಹಾಗೂ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾದ ಅಭ್ಯರ್ಥಿಗಳನ್ನು ಪ್ರಕ್ರಿಯೆಯಿಂದ ಕೈಬಿಟ್ಟು, ಕೇವಲ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದ ಹಾಗೂ ದಾಖಲಾತಿ ಪರಿಶೀಲನೆ ಹಾಗೂ ವೈದ್ಯಕೀಯ ಪರೀಕ್ಷೆಯಲ್ಲಿ ಅನರ್ಹಗೊಂಡ ಅಭ್ಯರ್ಥಿಗಳ ಸ್ಥಾನದಲ್ಲಿ ಬದಲಿ ಅಭ್ಯರ್ಥಿಗಳನ್ನು ಪರಿಗಣಿಸಿ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

ಮೂರು ಘಟಕಗಳಿಗೆ ಏಕಕಾಲದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆ ಹೆಚ್ಚಿದ್ದ ಕಾರಣ ಹೆಚ್ಚುವರಿ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ಹಾಗೂ ವೈದ್ಯಕೀಯ ಪರೀಕ್ಷೆ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ. ಈ ಸಂದರ್ಭದಲ್ಲಿ ಅಭ್ಯರ್ಥಿಗಳಿಗೂ ಸಹ ಈ ಬಗ್ಗೆ ಮಾಹಿತಿ ನೀಡಲಾಗಿರುತ್ತದೆ. ತಾತ್ಕಾಲಿಕ ಆಯ್ಕೆ ಪಟ್ಟಿಯನ್ವಯ ಹಾಗೂ ದಾಖಲಾತಿ ಪರಿಶೀಲನೆ ಮತ್ತು ವೈದ್ಯಕೀಯ ಪರೀಕ್ಷೆಯಲ್ಲಿ ಅರ್ಹಗೊಂಡ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ ನೇಮಕಾತಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಸದರಿ ಅಂತಿಮ ಆಯ್ಕೆ ಪಟ್ಟಿಯಲ್ಲಿ ಅರ್ಜಿದಾರರುಗಳು ಅರ್ಹತೆಯನುಸಾರ ಸ್ಥಾನವನ್ನು ಪಡೆದಿರುವುದಿಲ್ಲ. ಆದಾಗ್ಯೂ ಸಹ ಅರ್ಜಿದಾರರು ಕೇವಲ ದಾಖಲಾತಿ ಪರಿಶೀಲನೆ ಹಾಗೂ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾದ ಕಾರಣವನ್ನು ಪ್ರತಿಪಾದಿಸಿಕೊಂಡು ನೇಮಕಾತಿ ಆದೇಶ ನೀಡುವಂತೆ ಕೋರುತ್ತಿರುತ್ತಾರೆ.

ತತ್ಸಂಬಂಧ, ಸದರಿ ಅಭ್ಯರ್ಥಿಗಳು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ: 5160–5169/2015 ಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯಲ್ಲಿ ನೇಮಕಾತಿ ಆದೇಶ ಹೊರಡಿಸಿದ ನಂತರ ಕರ್ತವ್ಯಕ್ಕೆ ಹಾಜರಾಗದೇ ರಿಕ್ತ ಉಳಿದ ಸ್ಥಾನಗಳಿಗೆ ತಮ್ಮನ್ನು ಪರಿಗಣಿಸುವಂತೆ ಕೋರಿ ಅರ್ಜಿ ಸಲ್ಲಿಸಿದ್ದು, ಈ ಸಂಬಂಧ, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯೂ ಸಹ ಸದರಿ ಅರ್ಜಿದಾರರ ಮನವಿಯನ್ನು ಪರಿಶೀಲಿಸಿ ಅರ್ಜಿಯಲ್ಲಿ ಕೋರಲಾದ ಅಂಶಗಳನ್ನು ನೇಮಕಾತಿ ನಿಯಮಾನುಸಾರ ಪರಿಗಣಿಸಲು ಅವಕಾಶವಿಲ್ಲವೆಂದು ತಿಳಿಸಿ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ. ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ ಆದೇಶದ ವಿರುದ್ಧ ಅರ್ಜಿದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 1480/2017 (ಎಸ್–ಕೆಎಟಿ) ಯನ್ನೂ ಸಹ ಸಲ್ಲಿಸಿದ್ದು, ಸದರಿ ಅರ್ಜಿಯನ್ನೂ ಸಹ ಮಾನ್ಯ ನ್ಯಾಯಾಲಯವು ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ ಆದೇಶವನ್ನು ಎತ್ತಿ ಹಿಡಿದು ಅರ್ಜಿದಾರರ ಅರ್ಜಿಯನ್ನು ವಜಾಗೊಳಿಸಿ ಆದೇಶ ಹೊರಡಿಸಿರುತ್ತದೆ. (ನ್ಯಾಯಾಲಯದ ಆದೇಶದ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.)

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 19 ಎಸ್‌ಸಿಆರ್ 2006, ದಿನಾಂಕ:14-08-2006ರ ಕರ್ನಾಟಕ ಸಿವಿಲ್ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಆಯ್ಕೆ ಮೂಲಕ ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2006ರ ಕಂಡಿಕೆ-9ರ ಅಂಕಣ ಈ ಕೆಳಕಂಡತ್ತಿರುತ್ತದೆ.

9) Appointment of Candidates: (1)-

(2) The inclusion of the name of candidates in any select list published under Sub Rule-3 of Rule-8 shall not confer any right of appointment to the candidate.

(3) If a candidate consequent upon the issue of the order of appointment, does not report for duty, the vacancy against which he was selected shall be treated as a fresh vacancy to be filled in the next or subsequent recruitment ಎಂದು ತಿಳಿಸಲಾಗಿದೆ.

ಈ ಮೇಲ್ಕಂಡ ನಿಯಮಗಳನ್ವಯ, ಅಂತಿಮ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದರೂ ಸಹ ಅಭ್ಯರ್ಥಿಗಳು ನೇಮಕಾತಿಯನ್ನು ತಮ್ಮ ಹಕ್ಕೆಂದು ಪ್ರತಿಪಾದಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ ಹಾಗೂ ನೇಮಕಾತಿ ಆದೇಶ ಹೊರಡಿಸಿದ ನಂತರ ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಉಂಟಾಗುವ ರಿಕ್ತ ಸ್ಥಾನಗಳನ್ನು ಮುಂದಿನ ನೇಮಕಾತಿಗೆ ಪರಿಗಣಿಸಲು ನಿಯಮಗಳಲ್ಲಿ ಉಲ್ಲೇಖಿಸಲಾಗಿರುತ್ತದೆ. ಆದಾಗ್ಯೂ, ಅರ್ಜಿದಾರರುಗಳು ಆಯ್ಕೆಪಟ್ಟಿಯಲ್ಲಿ ಸ್ಥಾನ ಪಡೆಯದಿದ್ದರೂ ಹಾಗೂ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದ ಅಭ್ಯರ್ಥಿಗಳ ಸ್ಥಾನದಲ್ಲಿ ತಮ್ಮನ್ನು ಪರಿಗಣಿಸಿ ನೇಮಕಾತಿ ಆದೇಶ ನೀಡುವಂತೆ ಕೋರುತ್ತಿರುತ್ತಾರೆ.

2012ನೇ ಸಾಲಿನಲ್ಲಿ ಐಆರ್‌ಬಿ, ಮುನಿರಾಬಾದ್ ಮತ್ತು ವಿಜಯಪುರ ಘಟಕಗಳ ಸ್ಪೆಷಲ್ ಆರ್‌ಪಿಸಿ ಹುದ್ದೆಗೆ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿದ್ದು, ಅದರನ್ವಯ, 2014ನೇ ಸಾಲಿನಲ್ಲಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ. ತದನಂತರ, ನೇಮಕಾತಿ ಆದೇಶ ಹೊರಡಿಸಿದ ನಂತರ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಬಾಕಿ ಉಳಿದ ರಿಕ್ತ ಸ್ಥಾನಗಳಿಗೆ 2016, 2017, 2018 ಹಾಗೂ 2019ನೇ ಸಾಲಿನಲ್ಲಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗಿದ್ದು, ರಿಕ್ತ ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ. ಅಲ್ಲದೇ, 2013ನೇ ಸಾಲಿನಲ್ಲಿ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ-2013 ರನ್ವಯ, ಐ.ಆರ್.ಬಿ., ಮುನಿರಾಬಾದ್ ಘಟಕವು ಹೈದರಾಬಾದ್-ಕರ್ನಾಟಕ ಪ್ರದೇಶದ ಸ್ಪೆಷಲ್ ಆರ್‌ಪಿಸಿ ಹುದ್ದೆಯ ಶೇಕಡ 80 ಮೀಸಲಾತಿಗೆ ಒಳಪಟ್ಟಿದ್ದು, ಇದರನ್ವಯ, ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ.

**ಹೆಚ್‌ಡಿ/21/ಪಿಪಿಎಸ್/2024**

(ಡಾ॥ ಜಿ.ಪರಮೇಶ್ವರ)
ಗೃಹ ಸಚಿವರು